2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಮತಾ | ಪಿಡಬ್ಲೂ -9 |
| ಗಂಡನ ಹೆಸರು | - | ಕೃಷ್ಣೇಗೌಡ | ಸಿಡಬ್ಲೂ - 15 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಅರವಿಂದನಗರ, ಚಿಕ್ಕಮಗಳೂರು | |

ದಿನಾಂಕಃ 30-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತಿಲ್ಲ. ಮೃತ ಸುಧಾ ಗೊತ್ತಿಲ್ಲ. ಪ್ರಾಸಾ.8 ನನ್ನ ಅಕ್ಕನ ಮಗ. ಪ್ರಾಸಾ.1 ಸಂತೋಷ್ ಗೊತ್ತು, ಆತ ಪ್ರಾಸಾ.8 ರವರ ಸ್ನೇಹಿತ.

2. ಪ್ರಾಸಾ.8 ರವರು ಡಿಗ್ರಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಿನಿಂದ ಇಲ್ಲಿಯವರೆಗೆ ನಮ್ಮ ಮನೆಯಲ್ಲಿಯೇ ವಾಸವಾಗಿದ್ದಾನೆ. ಆತನ ಜೊತೆ ನಮ್ಮ ಸಂಬಂಧಿಕರ ಇಬ್ಬರು ಮಕ್ಕಳು ಸಹ ನಮ್ಮ ಮನೆಯಲ್ಲಿಯೇ ವಾಸವಾಗಿದ್ದಾರೆ. ಆ ರೀತಿ ಪ್ರಾಸಾ.8 ಮತ್ತು ಇನ್ನೂ ಇಬ್ಬರು ಮಕ್ಕಳು ನಮ್ಮ ಮನೆಯಲ್ಲಿ ವಾಸಿಸಲು ಖರ್ಚಿಗೆಂದು ತಿಂಗಳಿಗೆ ಇಂತಿಷ್ಟು ಹಣವನ್ನು ಕೊಡುತ್ತಿದ್ದರು. ನನ್ನ ಸಂಬಂಧಿಕರ ಮಕ್ಕಳನ್ನು ಹೊರತುಪಡಿಸಿ ನಾನು ಬೇರೆ ಯಾರನ್ನೂ ನನ್ನ ಮನೆಯಲ್ಲಿ ಇರಿಸಿಕೊಂಡಿಲ್ಲ.

3. ದಿನಾಂಕ 23.09.2021 ರಂದು ನನಗೆ ಆರೋಗ್ಯ ಸರಿ ಇರಲಿಲ್ಲ ಹಾಗಾಗಿ ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಪ್ರಾಸಾ.8 ರವರಿಗೆ ಫೋನ್ ಮಾಡಿ ನನಗೆ ಹುಷಾರಿಲ್ಲ ಬಂದು ಆಸ್ಪತ್ರೆಗೆ

ಕರೆದುಕೊಂಡು ಹೋಗು ಎಂದು ಹೇಳಿದೆನು. ಆಗ ಪ್ರಾಸಾ.8 ಮತ್ತು ಆತನ ಸ್ನೇಹಿತನಾದ ಪ್ರಾಸಾ.1 ರವರು ನಮ್ಮ ಮನೆಗೆ ಬಂದು ನನ್ನನ್ನು ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ 2 ದಿನಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇನೆ. ಆ ದಿನ ಅಂದರೆ ದಿನಾಂಕ 23.09.2021 ರಂದು ಪ್ರಾಸಾ.1 ಮತ್ತು ಪ್ರಾಸಾ.8 ರವರು ಸಂಜೆ 5.00 ಗಂಟೆಯವರೆಗೆ ನನ್ನೊಂದಿಗೆ ಸದರಿ ಆಸ್ಪತ್ರೆಯಲ್ಲಿ ಇದ್ದರು. ನಂತರ ಪ್ರಾಸಾ.8 ರವರು ಪ್ರಾಸಾ.1 ರವರನ್ನು ಬಿಟ್ಟು ಬರುವುದಾಗಿ ಹೇಳಿ ಹೋದರು.

4. ಮಾರನೇ ದಿನ ಪ್ರಾಸಾ.8 ರವರು ನನ್ನನ್ನು ನೋಡಲು ಸದರಿ ಆಸ್ಪತ್ರೆಗೆ ಬಂದನು. ಆಗ ಪ್ರಾಸಾ.8 ರವರು ನನಗೆ ಆರೋಪಿ ಆತನ ತಾಯಿಯನ್ನು ಕೊಲೆ ಮಾಡಿರುವುದಾಗಿ ತಿಳಿಸಿದನು. ನಂತರ ದಿನಾಂಕ 07.10.2021 ರಂದು ಬಸವನಹಳ್ಳಿ ಪೊಲೀಸರು ನನ್ನನ್ನು ಕರೆಸಿ ದಿನಾಂಕ 23.09.2021 ರಂದು ಪ್ರಾಸಾ.1 ರವರು ನಿಮ್ಮ ಜೊತೆ ಇದ್ದರೇ ಎಂದು ಕೇಳಿದರು ಮತ್ತು ನಾನು ಆ ದಿನ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಾಗಿದ್ದ ಬಗ್ಗೆ ದಾಖಲೆಯನ್ನು ಕೇಳಿದರು. ಆಗ ನಾನು ಪೊಲೀಸರಿಗೆ ದಿನಾಂಕ 23.09.2021 ರಂದು ಮೇಲೆ ಹೇಳಿದಂತೆ ಪ್ರಾಸಾ.1 ರವರು ಪ್ರಾಸಾ.8 ರವರೊಂದಿಗೆ ನಮ್ಮ ಮನೆಗೆ ಬಂದು ನನ್ನನ್ನು ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದ ಬಗ್ಗೆ ತಿಳಿಸಿರುತ್ತೇನೆ ಮತ್ತು ನಾನು ಸದರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ಸದರಿ ಆಸ್ಪತ್ರೆಯವರು

ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಡಿಸ್ಚಾರ್ಜ್ ಸಮ್ಮರಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಡಿಸ್ಚಾರ್ಜ್ ಸಮ್ಮರಿಯ ಕೇವಲ ಸ್ವಯಂ ದೃಢೀಕೃತ ಪ್ರತಿಯನ್ನು ಹಾಜರುಪಡಿಸಲಾಗಿದ್ದು ಅದರ ದೃಢೀಕೃತ ಪ್ರತಿ ಕಡತದಲ್ಲಿ ಲಭ್ಯವಿಲ್ಲದ ಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

5. ಅದೇ ದಿನ ಅಂದರೆ ದಿನಾಂಕ 07.10.2021 ರಂದು ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ನನಗೆ ತಿಳಿದಿದ್ದ ಮಾಹಿತಿಯನ್ನು ತಿಳಿಸಿ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ